**ದಿನಾಂಕ 05-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - ವಾದಿಯರ ಪರ ಶ್ರೀಮತಿ ವಿ.ವಿ.ಆರ್., ವಕೀಲರಿಂದಃ**

12. ನಮ್ಮ ವ್ಯಾಜ್ಯದ ಕುಟುಂಬಕ್ಕೆ ದೈವ ಇರುವುದಿಲ್ಲ. ದಾವಾ ಆಸ್ತಿಯಲ್ಲಿ ದೈವದ ಗುಡಿ ಇದೆ. ಸದರಿ ದೈವವನ್ನು ಅಂಗಾರ ಪೂಜಾರಿ ಹಾಗೂ ಕೂಕ್ರ ಪೂಜಾರಿಯವರು ನಂಬಿಕೊಂಡು ಬರುತ್ತಿದ್ದರು. ಅಂಗಾರ ಪೂಜಾರಿ ಹಾಗೂ ಕೂಕ್ರ ಪೂಜಾರಿಯವರ ಅಳಿಯ ಸಂತಾನ ಕುಟುಂಬ ಬೇರೆ ಬೇರೆ ಎಂದರೆ ಸರಿಯಲ್ಲ.

**ನ್ಯಾಯಾಲಯದ ಪ್ರಶ್ನೆಃ** ಅಳಿಯ ಸಂತಾನ ಕುಟುಂಬದಲ್ಲಿ ಯಾರೆಲ್ಲ ಸದಸ್ಯರು ಇರುತ್ತಾರೆ ಎಂದು ನಿಮಗೆ ಮಾಹಿತಿ ಇದೆಯೇ?

**ಉಃ** ಮಾಹಿತಿ ಇರುತ್ತದೆ. ತಾಯಿಯ ಕಡೆಯಿಂದ ಹಕ್ಕು ಬರುತ್ತದೆ.

13. ಕೂಕ್ರ ಪೂಜಾರಿಯ ಅಳಿಯ ಸಂತಾನ ಕುಟುಂಬ ಎಂದರೆ ಆತನ ತಾಯಿ ಹಾಗೂ ಆತನ ಸಹೋದರಿಯರು ಮಾತ್ರ ಬರುತ್ತಾರೆ ಎಂದರೆ ಸರಿ. ಸದರಿ ಕೂಕ್ರ ಪೂಜಾರಿಯ ಅಳಿಯ ಸಂತಾನ ಕುಟುಂಬಸ್ಥರು ಈಗ ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಕೂಕ್ರ ಪೂಜಾರಿಯ ಕುಟುಂಬದ ಮನೆ ಎಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ.

14. ಅಬ್ಬಕ್ಕ ಪೂಜಾರಿ ಜೀವಂತ ಇದ್ದಾಗ ಆಕೆಯ ಮನೆಯ ದಾಖಲೆಗಳಲ್ಲಿ ಯಾರ ಹೆಸರು ಇತ್ತು ಎಂದರೆ ಸಾಕ್ಷಿ, ಸದರಿ ಸಮಯ ಪಡಿತರ ಚೀಟಿ ಇರಲಿಲ್ಲ ಎನ್ನುತ್ತಾರೆ. ಅಬ್ಬಕ್ಕ ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ನೆನಪಿಲ್ಲ. ಕೂಕ್ರ ಪೂಜಾರಿ ತೀರಿಕೊಂಡ ದಿನಾಂಕ, ಇಸವಿ ನೆನಪಿಲ್ಲ. ಶೇಷಿ ಪೂಜಾರ್ತಿ ಜೀವಂತ ಇದ್ದಾಗ ದಾವಾ ಆಸ್ತಿಯ **ಮಾತೋಶ್ರೀ** ಮನೆಯ ಪಡಿತರ ಚೀಟಿಯಲ್ಲಿ ಶೇಷಿ ಹಾಗೂ ಆಕೆಯ ಮಕ್ಕಳಾದ ನಮ್ಮಗಳ ಹೆಸರು ಇತ್ತು. ಶೇಷಿ ಪೂಜಾರ್ತಿಯ ಗಂಡ ಅಂದರೆ

ನಮ್ಮ ತಂದೆಯಾದ ಬಾಡು ಪೂಜಾರಿ ಅವರ ಮನೆಯಾದ ಕುಂಜಾರುಗಿರಿಯಲ್ಲಿ ವಾಸವಾಗಿದ್ದರು. ಸದರಿ **ಮಾತೋಶ್ರೀ** ಮನೆಯನ್ನು ಅಂದಾಜು 1994 ರಲ್ಲಿ ಶೇಷಿ ಪೂಜಾರ್ತಿ ಕಟ್ಟಿರುತ್ತಾರೆ. ಬೈಹುಲ್ಲಿನ ಮನೆ ಇದ್ದ ಜಾಗದಲ್ಲಿ ಹೆಂಚಿನ ಮನೆ ಕಟ್ಟಿರುತ್ತೇವೆ. ಸದರಿ ಮನೆ ಇರುವ ಸರ್ವೆ ನಂಬ್ರ ನೆನಪಿಲ್ಲ. ಸದರಿ ಬೈಹುಲ್ಲಿನ ಮನೆ ಅಂಗಾರ ಪೂಜಾರಿ ಹಾಗೂ ಆತನ ಸಹೋದರಿಯರು ಒಟ್ಟಿಗೆ ಇದ್ದಾಗ ಕಟ್ಟಿದ್ದರು. ಸದರಿ ಬೈಹುಲ್ಲಿನ ಮನೆಗೆ ಪಡಿತರ ಚೀಟಿ ಇತ್ತು. ಯಾರ ಹೆಸರಿನಲ್ಲಿ ಇತ್ತು ಎಂದು ಸರಿಯಾಗಿ ನೆನಪಿಲ್ಲ. ಸದರಿ ಸಮಯ ನನ್ನ ಹೆಸರು ಪಡಿತರ ಚೀಟಿಯಲ್ಲಿ ಇತ್ತೋ ಇಲ್ಲವೋ ಎಂದು ನೆನಪಿಲ್ಲ. ಕೂಕ್ರು ಪೂಜಾರಿ ಕೂಡ ಸದರಿ ಮನೆಯಲ್ಲಿ ವಾಸವಿದ್ದರು. ನಾನು ಅವರು ವಾಸವಾಗಿದ್ದುದನ್ನು ನೋಡಿರುವುದಿಲ್ಲ. ಅವರು ನಾನು ಹುಟ್ಟುವ ಮೊದಲೇ ಮೃತಪಟ್ಟಿರುತ್ತಾರೆ. ನಾನು ಜನಿಸುವಾಗ ಅಬ್ಬಕ್ಕ ಪೂಜಾರಿ ಜೀವಂತ ಇದ್ದರು. ಅಬ್ಬಕ್ಕ ಪೂಜಾರಿ ಕೂಡ ಸದರಿ ಮನೆಯಲ್ಲೇ ವಾಸವಿದ್ದರು.

15. ನನ್ನ ತಾಯಿ ಶೇಷಿ ಪೂಜಾರ್ತಿಗೆ ಬ್ಯಾಂಕ್ ಖಾತೆ ಇರಲಿಲ್ಲ. ಆಕೆ ಮನೆಯ ಬೇಸಾಯ ಕೆಲಸ ಮಾಡುತ್ತಿದ್ದರು. ಕೂಲಿ ಕೆಲಸಕ್ಕೂ ಹೋಗುತ್ತಿದ್ದರು. ಆಕೆಗೆ ವ್ಯವಹಾರ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ಆಕೆ ಶಾಲೆಗೆ ಹೋಗದಿದ್ದರೂ ಲೋಕ ಜ್ಞಾನ ಇತ್ತು. ಆಕೆಯೇ ತನ್ನ ಆಸ್ತಿಯ ವ್ಯವಹಾರ ನಡೆಸುತ್ತಿದ್ದರು. ಆಕೆ ಬೇಸಾಯ ಮಾಡುವುದು, ಮಕ್ಕಳಿಗೆ ಮಾರಾಟ ಮಾಡುವುದು ಹಾಗೂ ಇನ್ನಿತರ ವ್ಯವಹಾರ ಮಾಡುತ್ತಿದ್ದರು. ಆಕೆ ನಿಪಿ.7 ರಂತೆ ವ್ಯವಸ್ಥಾ ಪತ್ರ ಹಾಗೂ ನಿಪಿ.8 ರಂತೆ ಕ್ರಯ ಪತ್ರ ಬರೆಯುವುದು ಬಿಟ್ಟು ಬೇರೆ ವ್ಯವಹಾರ ಮಾಡಿದ್ದಾರಾ ಎಂದರೆ ಮಾಡಿರುವುದಿಲ್ಲ. ಶೇಷಿ ಪೂಜಾರ್ತಿ ಜೀವಂತ ಇರುವಾಗ ಆಸ್ತಿಯ ದಾಖಲೆಗಳು ಆಕೆಯ ಬಳಿ ಇತ್ತು, ನಂತರ ನನ್ನ ಕೈಗೆ ಬಂದಿದೆ. ದಾಖಲೆಗಳೆಂದರೆ ಪಾಲು ಪಟ್ಟಿ ಇರುತ್ತದೆ. ಆಕೆಗೆ ದಾಖಲೆಗಳನ್ನು ಓದಲು ಆಗುತ್ತಿರಲಿಲ್ಲ, ಆದರೆ ಓದಿ ಹೇಳಿದರೆ ತಿಳಿದುಕೊಳ್ಳುತ್ತಿದ್ದಳು.

16. ನಿಪಿ.5 ವಿಭಾಗ ಪತ್ರದ ಬಗ್ಗೆ ಯಾರೆಲ್ಲಾ ವ್ಯವಹರಿಸಿರುತ್ತಾರೆ ಎಂದರೆ ಸಂಬಂದಪಟ್ಟವರು ವ್ಯವಹರಿಸಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ವ್ಯಕ್ತಿಗಳ ಹೆಸರು ನನಗೆ ನೆನಪಿಲ್ಲ. ನಿಪಿ.5 ರಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಓದಿ ಮಾಹಿತಿ ಇರುತ್ತದೆ. ನಿಪಿ.5 ರ ಬಗ್ಗೆ ಮಾಹಿತಿ ಇರುವವರು ಯಾರೂ ಈಗ ಜೀವಂತ ಇಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದಿನ ದಿನಾಂಕದಂದು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡುವ ಷರತ್ತಿನ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.